# <u>ಆರತಿಯ ಬೆಳಗಿರೆ ಅರಸಿ ರುಕ್ಮಿಣಿ</u>

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchhu Rayaru.
2. **Note:** The lyrics fully matches with the singer.  These lyrics are not available in the books published by Prof. SK Ramachandra Rao.  And also in books edited by Sri. Pavanje Guru Rao.

ರಾಗ:  ಶ್ರೀ ರಾಗ                ತಾಳ:  ಅಟ್ಟ

ಆರತಿಯ ಬೆಳಗಿರೆ, ಆರತಿಯ ಬೆಳಗಿರೆ  ‖ ಪ ‖

ಅರಸಿ ರುಕ್ಮಿಣಿ ಕೂಡ ಅರಸು ವಿಠಲಗೆ
ಬಿರುದಿನ ಶಂಖವ ಪಿಡಿದ ವಿಠಲಗೆ
ಸರಸಿಜ ಸಂಭವ ಸನ್ನುತ ವಿಠಲಗೆ
ನಿರುತ ಇಟ್ಟಿಗೆ ಮೇಲೆ ನಿಂತ ವಿಠಲಗೆ  ‖ ೧ ‖

ದಶರಥ ರಾಯನ ಉದರದಿ ವಿಠಲ
ಶಿಶುವಾಗಿ ಜನಿಸಿದ ಶ್ರೀ ರಾಮ ವಿಠಲ
ಪಶುಪತಿ ಗೋಪಿಯ ಕಂದನೆ ವಿಠಲ
ಅಸುರೆ ಪೂತನಿಯ ಕೊಂದ ವಿಠಲಗೆ  ‖ ೨ ‖

ಕಂಡಿರ ಬೊಬ್ಬುರ ವೆಂಕಟವಿಠಲನ
ಅಂಡಜವಾಹನ ಅಹುದೋ ನೀ ವಿಠಲ
ಪಾಂಡುರಂಗ ಕ್ಷೇತ್ರ ಪಾವನ ವಿಠಲಾ
ಪುಂಡರೀಕಾಕ್ಷ ಶ್ರೀ ಪುರಂದರ ವಿಠಲಗೆ  ‖ ೩ ‖

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಬಿರುದಿನ** = ಲಾಂಛನವಾದ

**ಇಟ್ಟಿಗೆಯ ಮೇಲೆ ನಿಂತ ವಿಠ್ಠಲನೆ** = ಪುಂಡಲೀಕನೆಂಬ ಒಬ್ಬ ಬ್ರಹ್ಮಣ. ಹೆಂಡತಿಯ ಮಾತು ಕೇಳಿ ತಂದೆ ತಾಯಿಯ ಸೇವೆಯನ್ನು ಬಿಟ್ಟಿದ್ದ. ಮುಂದೆ ಅವನಿಗೆ ಪಶ್ಚಾತ್ತಾಪ ಉಂಟಾಗಿ ತಾಯಿ ತಂದೆಗಳ ಸೇವೆಯನ್ನು ನಿಷ್ಠೆಯಿಂದ ಮಾಡತೊಡಗಿದ. ಇವನನ್ನು ಪರೀಕ್ಷಿಸಬೇಕೆಂದು ಶ್ರೀ ಹರಿ ಪ್ರತ್ಯಕ್ಷನಾಗಿ ಬಂದಾಗ, ನನ್ನ ಸೇವೆ ಮುಗಿಯುವವರೆಗೆ ಇಟ್ಟಿಗೆಯ ಮೇಲೆ ನಿಲ್ಲೆಂದು ದೇವರಿಗೆ ಹೇಳಿದ. ಅಲ್ಲಿಯೇ ದೇವರು ವಿಠ್ಠಲನಾಗಿ ಮೂರ್ತಿಗೊಂಡನೆಂದು ಲೋಕ ಕಥೆಯಿದೆ.

**ಪಶುಪತಿ -- ಗೋಪ** = ನಂದ

**ಬೊಬ್ಬುರ** = ಒಂದು ಊರ ಹೆಸರು

**ಅಂಡಜವಾಹನ** = ಪಕ್ಷಿವಾಹನ, ವಿಷ್ಣು

**ಪಾಂಡುರಂಗ ಕ್ಷೇತ್ರ** = ಪಂಢರಪುರ

**Classification:** Keerthane
**Ankita:** sri purandara vittala
**Location:** NA
**Category:** Arati Song
**Sub-Category:** arati, Rukmini, raja, shankha, ittige, rama, gopi, shiva, putani, srinivasa, panduranga, Dasharatha,
**Pravachana:** NA
**Explanation:** NA